**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಪಿ. ಸುಜಾ ಕುಶಾಲಪ್ಪ ಇವರ ಶೂನ್ಯ ವೇಳೆ ಪ್ರಸ್ತಾವನೆಗೆ ಉತ್ತರ**

**ಪ್ರಶ್ನೆ:**

ಕಾಡಾನೆ ಹಾವಳಿಯನ್ನು ತಡೆಗಟ್ಟಲು ನಿಯೋಜನೆಗೊಂಡಿರುವ ಕಾರ್ಯಪಡೆಯ ಸಿಬ್ಬಂದಿ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು:

**ಉತ್ತರ:**

ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 21.11.2022ರಲ್ಲಿ ಚಿಕ್ಕಮಗಳೂರು, ಹಾಸನ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ಭಾಗಗಳಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಜಿಲ್ಲಾ ಆನೆ ಕಾರ್ಯಪಡೆ ರಚಿಸಲಾಗಿದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಅಪಜೀ 311 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 01.02.2023ರಲ್ಲಿ ಕಾಡಾನೆ ಹಾವಳಿ ತಡೆಯಲು ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಆನೆ ಕಾರ್ಯಪಡೆ ರಚಿಸಲಾಗಿದೆ. ಮುಂದುವರೆದು, ಮೈಸೂರು ವೃತ್ತ ವ್ಯಾಪ್ತಿಯಲ್ಲಿ ಚಿರತೆ ಹಾವಳಿ ತಡೆಗಟ್ಟಲು ಸರ್ಕಾರದ ಆದೇಶ ಸಂಖ್ಯೆ: ಅಪಜೀ 311 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 31.01.2023ರಲ್ಲಿ ಚಿರತೆ ಕಾರ್ಯಪಡೆ ರಚಿಸಲಾಗಿದೆ.

ದಿನಾಂಕ: 04.06.2023ರಂದು ರಾಮನಗರ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿರುವ ರಾಮನಗರ ಹಾಗೂ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಜಿಲ್ಲಾ ಆನೆ ಕಾರ್ಯಪಡೆಯನ್ನು ರಚಿಸುವ ಕುರಿತು ಆಶ್ವಾಸನೆ ನೀಡಿದನ್ವಯ ಸರ್ಕಾರದ ಆದೇಶ ಸಂಖ್ಯೆ: ಅಪಜೀ 170 ಎಫ್‌ಡಬ್ಲ್ಯೂಎಲ್ 2022, ದಿನಾಂಕ: 30.06.2023ರಲ್ಲಿ ಕಾಡಾನೆ ಹಾವಳಿ ತಡೆಯಲು ರಾಮನಗರ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ಜಿಲ್ಲಾ ಆನೆ ಕಾರ್ಯಪಡೆಯನ್ನು ರಚಿಸಲಾಗಿದೆ. ಈ ರೀತಿ ಕಾಡಾನೆ ಹಾವಳಿ ತಡೆಗಟ್ಟಲು ಸರ್ಕಾರದ ಆದೇಶಗಳಲ್ಲಿ ರಚಿಸಲಾದ ಒಟ್ಟು 7 ಜಿಲ್ಲಾ ಆನೆ ಕಾರ್ಯಪಡೆಗಳು ಹಾಗೂ ಚಿರತೆ ಕಾರ್ಯಪಡೆಗಳಿಗೆ ಅವಶ್ಯವಿರುವ ಅಧಿಕಾರಿ / ಸಿಬ್ಬಂದಿ, ವಾಹನಗಳು, ವಾಕಿಟಾಕಿ, ಬಂದೂಕು, ಪಟಾಕಿ ಹಾಗೂ ಸಾರ್ವಜನಿಕ ಜಾಗೃತಿ ಮೂಡಿಸಲು ಅವಶ್ಯವಿರುವ ಸಲಕರಣೆಗಳನ್ನು ಒದಗಿಸಲಾಗಿದ್ದು, ಸದರಿ ಕಾರ್ಯಪಡೆಗಳು ಕಾರ್ಯಾನುಷ್ಠಾನಗೊಂಡು ಸುಸೂತ್ರವಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಕಾರ್ಯಪಡೆಗಳು ಕಾರ್ಯಕ್ಷಮತೆ ಕುರಿತ ಸಾಧ್ಯತೆಯ ಪರಿಶೀಲನೆ ಕೈಗೊಂಡು, ಅವಶ್ಯವಿದ್ದಲ್ಲಿ ಈ ಕಾರ್ಯಪಡೆಗಳಿಗೆ ಹೆಚ್ಚುವರಿ ಸಿಬ್ಬಂದಿ ಅಥವಾ ಉಪಕರಣಗಳನ್ನು ನೀಡಲು ಪರಿಶೀಲಿಸಲಾಗುವುದು.

ಸಂಖ್ಯೆ: ಅಪಜೀ 78 ಎಫ್‌ಡಬ್ಲ್ಯೂಎಲ್ 2023

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು